ಮೋರೆ ಓದಿಗೆ ಸ್ಪಂದಿಸುವುದನ್ನು ಕಾಯುತ್ತಿದ್ದರು. ಮಾಸ್ತರು ಚಾಳದ ಬಿಡಾರಕ್ಕೆ ಹೊರಟು ಹೋಗಿದ್ದರು. ರಾತ್ರಿ ಗಾಢವಾಗುತ್ತಿದ್ದಂತೆಯೆ ಸಮುದ್ರದ ಘೋಷ ದೊಡ್ಡದಾಗಿ ಕೇಳಿಸತೊಡಗಿತು. ಗದ್ದೆ ಬಯಲಲ್ಲಿ ಸನಿಹವೇ ಟೆಂಟ್ ಆಟದ ಚಂಡೆ ಸಪ್ಪಳ ಕೇಳಿಸುತ್ತಿತ್ತು. ಒಮ್ಮೊಮ್ಮೆ ಗಾಳಿಗುಂಟ ಮೃದಂಗ ಮತ್ತು ಭಾಗವತರ ಪದ್ಯ ತೇಲಿ ಬರುತ್ತಿತ್ತು. ಮಂಚದಿಂದ ಇಳಿದ ಅವಧಾನಿ ಚಂಡೆಯ ತಾಳಕ್ಕೆ ಹೆಜ್ಜೆ ಹಾಕಿ, ಪದ್ಯಕ್ಕೆ ಹಸ್ತಾಭಿನಯ ಮಾಡುತ್ತ ಹುಬ್ಬು ಕುಣಿಸಿ, ಕಾಲು ಡೊಂಕಾಗಿಸಿ ತುಸು ಸೊಂಟ ತಗ್ಗಿಸಿ ಸಣ್ಣ ಜಾಗವನ್ನು ರಂಗಸ್ಥಳವಾಗಿಸಿ ಕುಳಿತಿದ್ದ ಮೂವರನ್ನು ಪ್ರೇಕ್ಷಕರ ಬೃಹತ್ ಸಭೆಯಂತೆ ಕಲ್ಪಿಸಿ ವೃತ್ತಾಕಾರದಲ್ಲಿ ಕುಣಿಯಲು ಆರಂಭಿಸಿದ. 'ಎಲಾ ಭೀಮ ನಿನ್ನ ಕಚ್ಚೆ ಹರಕು ಕಥೆಯನ್ನು ಪೇಳುವೆ...' ಎಂದು ಮಂಚದ ಮೇಲೆ ಕುಸಿದ. ಪದ್ಯ ಕ್ಷೀಣಗೊಂಡು ರಸಾಭಾಸ ದೃಶ್ಯದಂತೆ ಜನಾರ್ದನ ಅವಧಾನಿ ಮುಸುಕೆಳೆದು ಮಲಗಿದ. ನಗು ಉಕ್ಕಿಸಿದ ಈ ಹಠಾತ್ ನಾಟಕೀಯ ಪ್ರಸಂಗ ಯಮುನಕ್ಕ ವಿವರಿಸಿದ ಹಿನ್ನೆಲೆ ಕೇಳಿದ ನಂತರ ವಿಷಾದವಾಯಿತು.

ಯಮುನಕ್ಕನಿಗೆ ಮಾತ್ರ ನೆನಪಿದ್ದ ಘಟನೆಯದು. ಹೈಸ್ಕೂಲಿಗೆ ಹೋಗುತ್ತಿದ್ದ ದಿನಗಳವು. ಜನಾರ್ದನನ ತಂದೆ ವಿಶ್ವಾಮಿತ್ರ ಅವಧಾನಿ ನಿವೃತ್ತರಾಗಿ ಬ್ರಹ್ಮೂರಿನ ಸಮೀಪದ ಪರ್ವತೇಶ್ವರದ ದೇವಸ್ಥಾನದ ಪೂಜೆಯನ್ನು ವಹಿಸಿಕೊಂಡಿದ್ದರು. ಕಲ್ಲಿನ ಹಳೆಯ ದೇವಸ್ಥಾನ ಬೆಟ್ಟದ ತಲೆಯ ಮೇಲಿದೆ. ಬೆಟ್ಟದ ತಪ್ಪಲಲ್ಲಿ ದೇವರ ಹೆಸರಿನಲ್ಲಿ ಒಂದು ಎಕ್ರೆ ಮಕ್ಕಿಗದ್ದೆ ಮತ್ತು ಕವಳದ ಖರ್ಚಿಗೆ ಎಂಬಂತೆ ಹತ್ತಾರು ಮರಗಳ ಪಾಳುಬಿದ್ದ ಅಡಿಕೆ ತೋಟವಿದೆ. ಟೆನೆನ್ಸಿ ಕಾಯ್ದೆಯ ಕೃಪೆಯಿಂದ ದೇವರ ಒಕ್ಕಲಾದ ಅವಧಾನಿಯರಿಗೆ ಜಮೀನಿನ ಒಡೆತನ ದೊರೆಯಿತು. ದೇವಸ್ಥಾನದ ಮೊಕ್ತೇಸರ ಪಾಗಾರಿ ಪಾಂಡೇಶ್ವರರು ಸಲ್ಲಿಸಿದ ತಕರಾರು ದಾವೆ ಅನೂರ್ಜಿತಗೊಂಡು ದ್ವೇಷ ಮಾತ್ರ ಬೂದಿಯೊಳಗಣ ಕೆಂಡದಂತೆ ಉಳಿದು ಹೋಯಿತು. ಅವಧಾನಿ ಮತ್ತು ಪಾಂಡೇಶ್ವರರು ತಾಳಮದ್ದಲೆ ಅರ್ಥಧಾರಿಗಳು. ಹಲವು ಬೈಠಕ್ಕಿನಲ್ಲಿ ಮುಖಾಮುಖಿಯಾದವರು. ವಾರ್ಷಿಕ ಸಂಪ್ರದಾಯದಂತೆ ಶಿವರಾತ್ರಿಯಂದು ಪರ್ವತೇಶ್ವರ ದೇವಸ್ಥಾನದಲ್ಲಿ ತಾಳಮದ್ದಲೆ. 'ಕೀಚಕವಧೆ' ಪ್ರಸಂಗದಲ್ಲಿ ಪಾಂಡೇಶ್ವರರದ್ದು ಭೀಮನ ಪಾತ್ರ. ವಿಶ್ವಾಮಿತ್ರ ಅವಧಾನಿಯವರದ್ದು ಕೀಚಕ. ಪರಸ್ಪರ ಮೂದಲಿಕೆಯ ವಾಗ್ವಾದ ಒಂದು ಹಂತದಲ್ಲಿ ವೈಯಕ್ತಿಕ ನಿಂದನೆಗೆ ಹೊರಳಿತು. 'ಎಷ್ಟು ಗ್ರಾಮಗಳಲ್ಲಿ ನಿನ್ನ ಅಕ್ರಮ ಬೀಜ ಬಿತ್ತನೆಯ ಸೇವೆ ನಡೆದಿದೆಯೆಂದು ಈ ಪುರದ ಸಕಲರಿಗೂ ಗೊತ್ತು' ಎಂದು ಪಾಂಡೇಶ್ವರರು ಅಸ್ತ್ರ ಪ್ರಯೋಗಿಸಿದರು. ಪರ್ವತೇಶ್ವರ ದೇವರ ಭೂಮಿಯನ್ನು ಕಬಳಿಸಿದವ ಎಂಬ ಅರ್ಥ ಬರುವ ಹಾಗೆ ಆಡಿದ ಮಾತಿಗೆ ಪ್ರೇಕ್ಷಕರು ನಗೆಯಲ್ಲಿ ತೇಲಿದರು. ಅವಧಾನಿಯವರು, 'ಹಿಡಂಬಿಯಂಥ ರಾಕ್ಷಸಿಯನ್ನೂ ಬಿಡದ ನಿನ್ನ ಲಂಪಟತನ ಯಾರಿಗೆ ಗೊತ್ತಿಲ್ಲ ಹೇಳು' ಎಂದು ತಿರುಗೇಟು ನೀಡಿದರು. ಈ ಮಾತಿಗೆ ಸ್ಫೋಟಿಸಿದ ಸಭೆಯ ಅಬ್ಬರದ ನಗು ನಿಲ್ಲುವ ಲಕ್ಷಣ ತೋಚದೆ ಪಾಂಡೇಶ್ವರರು ಜಗಳಕ್ಕೆ ನಿಂತು ಭಾಗವತರ ಕೈಯಲ್ಲಿದ್ದ ತಾಳವೊಂದನ್ನು ಕಸಿದು ಜನಾರ್ದನನತ್ತ ಎಸೆದರು. ಜನರ ಮಧ್ಯಪ್ರವೇಶದಿಂದ ಹೊಡೆದಾಟಕ್ಕೆ ಹೋಗದೆ ಸಭಾತ್ಯಾಗ ಮಾಡಿದರು. ಅವರ ತೀವ್ರ ಅವಮಾನಕ್ಕೆ ಕಾರಣವಿಲ್ಲದಿರಲಿಲ್ಲ. ಬ್ರಹ್ಮೂರಿನ ದಢೂತಿ ವಿಧವೆಯ ಜತೆಗಿನ ಅವರ ಸಖ್ಯ ಜಗಜ್ಜಾಹೀರಾಗಿತ್ತು. 'ಆ ಹಿಡಂಬಿಗೆ ಪಾಂಡೇಶ್ವರರು ಹೇಗೆ ಗಂಟು ಬಿದ್ದರಪ್ಪ' ಎಂದು ಜನ ಬೆನ್ನ ಹಿಂದೆ ಆಡಿಕೊಳ್ಳುತ್ತಿದ್ದರು. ಸಾಯುವ ತನಕ ಪಾಂಡೇಶ್ವರರು ದ್ವೇಷ ಕಾರುತ್ತಲೇ ಇದ್ದರಂತೆ.

'ಅಂದಿನ ಶಿವರಾತ್ರಿ ಜಾಗರಣೆಯ ಅವಾಂತರ ನೆನಪಾಗಿ ನಿನ್ನಪ್ಪ ಕುಣಿದರು ನೋಡು', ಯಮುನಕ್ಕನ ತರ್ಕ ಅವನಿಗೆ ನಿಜವೆನಿಸಿರಬೇಕು.

'ಪಾಂಡೇಶ್ವರರ ಆರೋಪಕ್ಕೆ ಈ ಕಾದಂಬರಿ ಉತ್ತರ ಅಂತಾಯ್ತು.' ಶ್ರೀಪತಿಯ ಮಾತನ್ನು ಗಜಾನನ ಅನುಮೋದಿಸಿದ. ಇಬ್ಬರೂ ಪಾಳಿ ಪ್ರಕಾರ ಕಾದಂಬರಿಯನ್ನು ಓದುವ ಅವಸರಕ್ಕೆ ಒಳಗಾದರು.

ಮರುದಿನ ಮುಂಜಾನೆ ಮಾಸ್ತರು ಸೈಕಲ್ ಸಮೇತ ಪ್ರತ್ಯಕ್ಷರಾದರು. ಜನಾರ್ದನ ಯಾವ ತಗಾದೆ ಎತ್ತದೆ ಗಾಬರಿಯಾಗುವಷ್ಟು ತಣ್ಣನೆಯ ವಿಧೇಯತೆಯಿಂದ ನೇಣಿಗೆ ಗೋಣು ಕೊಡುವವರಂತೆ ಒಂದೇ ಮಾತಿಗೆ ಗಿಳಿ ಗುಟ್ಟಕ್ಕೆ ನೇತಾಡುತ್ತಿದ್ದ ಪ್ಯಾಂಟ್-ಶರ್ಟ ತೊಟ್ಟು ಹೊರ ಬಂದ. ಕ್ಯಾರಿಯರ್ ಮೇಲೆ ಕೂರುವ ಹಟ ಮಾಡಿದರೂ ಮಾಸ್ತರು ಸೀಟಿನ ಎದುರು ಕಂಬಿಯ ಮೇಲೆ ತೊಡೆಯೇರಿ ಅಡ್ಡ ಕೂರುವ ಮಕ್ಕಳಂತೆ